## ಪ್ರಧಾನ ದಿವಾಣಿ ಮತ್ತು ಪ್ರ.ದ.ನ್ಯಾದಂ.ನ್ಯಾಯಾಲಯ ಮುಧೋಳ.

**ಸಿಸಿ ನಂ.496/2015**

1) ಸರ್ಕಾರ ಲೋಕಾಪೂರ ಪೋ ಠಾಣೆ --- ಪಿರ್ಯಾದಿ.

- ವಿರುದ್ಧ -

1) ಕರೀಮಸಾಬ ಕಾಶೀಮಸಾಬ ಮುಲ್ಲಾ ವ: 53, ಕರೀಮಸಾಬ. ಕಾಸೀಮಸಾಬ ಮುಲ್ಲಾ
ಸಾ: ವಿಜಯಪೂರ, ಜಿಲ್ಲೆ: ವಿಜಯಪೂರ --- ಆರೋಪಿ

**ದಿ: 12-10-2017**

**-ದಂ.ಪ್ರ.ಸಂ.ಕಲಂ-252 ರಡಿ ಆಪಾದನೆ-**

ದಿನಾಂಕ: 15-09-2014 ರಂದು ಮದ್ಯಾಹ್ನ 02-30 ಗಂಟೆ ಸುಮಾರಿಗೆ ನ್ಯಾಯಾಲಯದ ಸೀಮೆ ಸ್ಥಳ ಹದ್ದಿ ಪೈಕಿ ಲೋಕಾಪೂರ ಪೋ.ಠಾಣೆಯ ವ್ಯಾಪ್ತಿಯಲ್ಲಿ ಬರತಕ್ಕ ಲೋಕಾಪೂರ ಪೋಲೀಸ ಠಾಣೆಯಿಂದ ಪೂರ್ವಕ್ಕೆ ಸುಮಾರು 08 ಕಿ.ಮೀ. ಅಂತರದಲ್ಲಿ ಬಾಗಲಕೋಟ ರೋಡಿನ ಖಜ್ಜಿಡೋಣಿಯ ಪೂಲಿನ ಹತ್ತಿರ ರಸ್ತೆ ಮೇಲೆ ಆರೋಪಿತನಾದ ಕರೀಮಸಾಬ ಕಾಶೀಮಸಾಬ ಮಲ್ಲಾ, ಸಾ. ವಿಜಯಪೂರ, ನೀನು ನಡೆಸುತ್ತಿದ್ದ ಬಿ.ಎಲ್.ಡಿ.ಇ. ಸಂಸ್ಥೆಯ ಅಂಬುಲೆನ್ಸ ವಾಹನ ನಂ.ಕೆಎ-28, ಬಿ-9289 ನೇದ್ದನ್ನು ವಿಜಯಪೂರದಿಂದ ಲೋಕಾಪೂರ ಮಾರ್ಗವಾಗಿ ಬೆಳಗಾವಿಗೆ ಬರುವಾಗ ಖಜ್ಜಡೋಣಿ ಕಡೆಯಿಂದ ಲೋಕಾಪೂರ ಕಡೆಗೆ ಜೋರಾಗಿ ಮತ್ತು ಅಲಕ್ಷತನದಿಂದ ನಡೆಯಿಸಿಕೊಂಡು ಹೋಗಿ ನಿಮ್ಮ ಮುಂದೆ ಹೊರಟ ಯಾವುದೇ ಮೋಟರ ಸೈಕಲ್ಲಿಗೆ ಓವಟೇಕ ಮಾಡಿ ಎದುರಿನಿಂದ ಲೋಕಾಪೂರ ಕಡೆಯಿಂದ ಬಾಗಲಕೋಟ ಕಡೆಗೆ ಹೋಗುತ್ತಿದ್ದ ಕಾರ ನಂ.ಕೆಎ-28, ಎನ್-2039 ನೇದ್ದಕ್ಕೆ ಬಲಗಡೆ ಸೈಡಿನಿಂದ ಡಿಕ್ಕಿಹೊಡಿಸಿ ಅಪಗಾತಪಡಿಸಿ ಕಾರಿನಲ್ಲಿದ್ದ ಚಾಲಕನಿಗೆ ತಲೆಗೆ, ಹಣೆಗೆ, ಬಲಗೈಗೆ, ಅಲ್ಲಲ್ಲಿ ಬಾರಿಗಾಯಪಡಿಸಿದ್ದು, ಅಲ್ಲದೆ ಅಬುಲೆನ್ಸ ವಾಹನದಲ್ಲಿದ್ದ ಯೇಶಪ್ಪ ಮಿತ್ರಾ ಇವರಿಗೆ ತಲೆಗೆ ಅಲ್ಲಲ್ಲಿ ಸಾಧಾಪೆಟ್ಟುಪಡಿಸಿ ಅಲ್ಲದೆ ಅಂಬುಲೆನ್ಸ ಚಾಲಕನಾದ ನೀನು ಸಹ ಹಣೆಗೆ ಸಾದಾ ಗಾಯ ಹೊಂದಿ ಅಲ್ಲದೆ ಕಾರ ಚಾಲಕ ಪರಸುರಾಮ ನೀಲನಾಯಕ ಇವನು ಬಾಗಲಕೋಟ ಸರ್ಕಾರಿ ಆಸ್ಪತ್ರೆಯಲ್ಲಿ ಉಪಚಾರಹೊಂದುವಾಗ ಅದೇ ದಿನ ಮೃತವಾಗುವಂತೆ ಮಾಡಿ ಆ ಮೂಲಕ ನೀನು ಭಾ.ದಂ.ಸಂ.ಕಲಂ 279, 337, 304(ಎ) ರ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ.

ಪ್ರಶ್ನೆ 1೦: ಆಪಾದನೆ ಓದಿ ಹೇಳಿದ್ದು ತಿಳಿಯಿತೋ ಹೇಗೆ?
ಉತ್ತರ: 1) ತಿಳಿಯಿತು

ಪ್ರಶ್ನೆ2೦: ಆಪಾದನೆಯನ್ನು ಒಪ್ಪಿಕೊಳ್ಳುವಿರೋ ಇಲ್ಲವೇ ವಿಚಾರಣೆಯಾಗಬೇಕೋ?
ಉತ್ತರ: 1) ಇಲ್ಲ ವಿಚಾರಣೆಮಾಡಬೇಕು.

ಓ ಹೇ ಕೇ ಸರಿ ಇದೆ.

12/10

ಪ್ರಧಾನ ಜೆ.ಎಮ್.ಎಫ್.ಸಿ ಮುಧೋಳ.